JETIR.ORG ISSN: 2349-5162 | ESTD Year : 2014 | Monthly Issue
JOURNAL OF EMERGING TECHNOLOGIES AND INNOVATIVE RESEARCH (JETIR)
An International Scholarly Open Access, Peer-reviewed, Refereed Journal

# ಕನ್ನಡದ ವಚನಕಾರ್ತಿಯರು: ಒಂದು ಅವಲೋಕನ

**ಡಾ. ಗೋವಿಂದರಾಯ ಎಂ**

ಸಹ ಪ್ರಾಧ್ಯಾಪಕ, ಕನ್ನಡ ವಿಭಾಗ

ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುಣಿಗಲ್

ತುಮಕೂರು ಜಿಲ್ಲೆ, ಕರ್ನಾಟಕ ರಾಜ್ಯ – 572130

graya.vinu@gmail.com

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ವಚನ ಸಾಹಿತ್ಯ ಎಂಬ ವಿಶಿಷ್ಟ ಕೊಡುಗೆ ಬಸವಾದಿ ಶರಣರು ನೀಡಿದ ಅದ್ವಿತೀಯ ಕಾಣಿಕೆ. 12ನೇ ಶತಮಾನದ ಶಿವಶರಣ ಶರಣರು ತಮ್ಮ ಅನುಭವದ ಮೂಲಕ ವಚನಗಳನ್ನು ರಚಿಸಿ ಸರ್ವಸಮಾನತೆಯ ತಳಹದಿಯ ಮೇಲೆ ಸಮಾಜವನ್ನು ನಿರ್ಮಿಸಲು ಹೊರಟಿದ್ದು ಇಂದಿಗೂ ಆದರ್ಶ ಮತ್ತು ಅನುಕರಣೀಯವಾದುದಾಗಿದೆ. ವಚನಕಾರರು ತಮ್ಮ ಅಂತರಂಗದ ಪ್ರಾಮಾಣಿಕ ಪ್ರತಿಬಿಂಬವನ್ನು, ಅನುಭವದ ಆತ್ಮೀಯತೆಯನ್ನು, ಕಂಡುಂಡ ಸರ್ವವನ್ನು ಅಕ್ಷರಗಳ ಮೂಲಕ ಅನಾವರಣಗೊಳಿಸಿದ ಪ್ರತಿಫಲವೇ ವಚನಗಳು. ಆಡುನುಡಿಗೆ ಹತ್ತಿರವಾದ ಭಾಷೆಯನ್ನು ತಮ್ಮ ಅಭಿವ್ಯಕ್ತಿ ಮಾಧ್ಯಮವನ್ನಾಗಿ ಬಳಸಿಕೊಂಡು ಸಮಾನತೆಯ ಸಮಾಜವನ್ನು ಕಟ್ಟ ಹೊರಟಿದ್ದು ವಿಶೇಷವೇ ಸರಿ. ಅಂದಿನ ಕಾಲದಲ್ಲಿ ಆಚರಣೆಯಲ್ಲಿದ್ದ ಮೂಢನಂಬಿಕೆ, ಸ್ಥಾವರ ಪೂಜೆ, ರೂಢಮೂಲ ಕಂದಾಚಾರ, ಯಜ್ಞ – ಹೋಮ – ಹವನಗಳ ಖಂಡನೆಗಳ ಬಗ್ಗೆ ನಿಷ್ಠೂರವಾಗಿ ಮಾತನಾಡುತ್ತಾ, ಸತ್ಯ, ಅಹಿಂಸೆ, ಶ್ರದ್ಧೆ, ಪ್ರಾಮಾಣಿಕತೆ, ಕಾಯಕ – ದಾಸೋಹ, ಸಮಾನತೆ ವಿಷಯಗಳ ಬಗ್ಗೆ ಪ್ರೇರಣೆ ನೀಡಿ ಇಂದಿಗೂ ಅಜರಾಮರರಾಗಿದ್ದಾರೆ. ಸರ್ವರೂ ಸಮಾನತೆಯಿಂದ ಬಾಳಬೇಕು, ಯಾರೂ ಮೇಲಲ್ಲ, ಯಾರೂ ಕೀಳಲ್ಲ ಎಂದು ಸಾರುತ್ತ, ಅನುಭವ ಮಂಟಪವನ್ನು ಸ್ಥಾಪಿಸಿ ಇಂದಿನ ಪ್ರಜಾಪ್ರಭುತ್ವ ವ್ಯವಸ್ಥೆಗೆ ಬುನಾದಿ ಹಾಕಿದ ಮಹನೀಯರೆಂದರೆ ತಪ್ಪಾಗಲಾರದು.

ವಚನಗಳಲ್ಲಿ ಸಾಮಾನ್ಯ ಮನುಷ್ಯರ ತಿಳುವಳಿಕೆಯ ಭಾಷೆಯ ಬಳಕೆ, ದಿನನಿತ್ಯ ಜೀವನದಲ್ಲಿ ಕಾಣುವ ಸಾಂದರ್ಭಿಕ ಸ್ಥಿತಿಗತಿಗಳನ್ನು ಅಲಂಕಾರದಂತೆ ಬಳಸಿಕೊಂಡ ರೀತಿ, ಒಟ್ಟಾರೆ ಭಾವನೆಯನ್ನು ಅಭಿವ್ಯಕ್ತಿಸಿದ ಪರಿ, ಇದಕ್ಕೆಲ್ಲ ಇಂಬು ಕೊಡುವಂತೆ ಸಾಮಾಜಿಕ ಚಳವಳಿಯೊಂದರ ಪ್ರಸಾರಕ್ಕೆ ಮತ್ತು ಮಾನವೀಯ ಗುಣಗಳಿಗೆ ಕೊಟ್ಟ ಗೌರವ, ಸಾರ್ವಕಾಲಿಕ ಮೌಲ್ಯಗಳ ಪ್ರತಿಪಾದನೆ ಇವುಗಳ ಮೂಲಕ ವಚನ ಸಾಹಿತ್ಯ ಇತರ ಸಾಹಿತ್ಯ ಪ್ರಕಾರಗಳಿಗಿಂತ ವಿಭಿನ್ನವಾಗಿ ಕಾಣುವಂತಾಯಿತು. ಸಾಹಿತ್ಯ ಎಂಬುದು ಕೇವಲ ಅರಮನೆ ಮತ್ತು ಗುರುಮನೆಗಳಲ್ಲಿ ಇದ್ದಿದ್ದರಿಂದ ಪಂಡಿತರ ತುತ್ತಾಗಿ ಮೇಲಿನ ವರ್ಗದವರ ಸ್ವತ್ತಾಗಿದ್ದ ಸಂದರ್ಭದಲ್ಲಿ ಅಕ್ಷರ ಅರಿವಿನ ಸಾಧನವಾಗಿ ಜನಸಾಮಾನ್ಯರಿಗೆಲ್ಲಾ ಸಲುವಂತೆ ಹರಡಿಸಿದವರು ವಚನಕಾರರು. ವಚನಗಳಲ್ಲಿ ವಚನಕಾರರ ಅಂತರಂಗದ ಪ್ರಾಮಾಣಿಕ ಪ್ರತಿಬಿಂಬವನ್ನು ಕಾಣಬಹುದು ಎಂದು ಹೇಳಿದಂತೆ, ಈ ಬಗೆಯ ಆತ್ಮನಿವೇದನೆ, ಆತ್ಮ ನಿರೀಕ್ಷಣೆ ಹಾಗೂ ಆತ್ಮ ಟೀಕೆಗಳು ವಚನಗಳಲ್ಲಿ ಬಂದದ್ದರ ಪರಿಣಾಮವಾಗಿ ಲೋಕ ಸುಧಾರಣೆಯ ಕಾರ್ಯವನ್ನು ಕೈಗೊಂಡು ಅದೇ ಆದರ್ಶವನ್ನು ಜನರಲ್ಲಿ ಬಿತ್ತಲು ವಚನಕಾರರು ಪ್ರಯತ್ನಿಸಿದರು. ಸರ್ವರೂ ಅನುಸರಿಸಬಹುದಾದ ಸಮಾನತೆಯ ಆಧಾರದ ಮೇಲೆ ಜೀವನ ಧರ್ಮ ಬೋಧನೆ ಮಾಡಿದ ಮಹಾಪುರುಷರು ಈ ವಚನಕಾರರು. ಸಾಮಾಜಿಕ ಸಮಾನತೆಯನ್ನು ಎತ್ತಿ ಹಿಡಿದ ಜಗತ್ತಿನ ಶ್ರೇಷ್ಠ ದಾರ್ಶನಿಕರಿಗಿಂತಲೂ ಎತ್ತರದ ಸಾಲಿನಲ್ಲಿ ನಿಲ್ಲುವ ವಚನಕಾರರ ಶಾಂತಿ ಸಂದೇಶಗಳು ಅಶಾಂತಿಯಿಂದ ಕಂಗಾಲಾಗಿರುವ ಇಂದಿನ ಜಗತ್ತನ್ನ ಬೆಳಕಿನ ಕಡೆಗೆ ಕೊಂಡೊಯ್ಯಲು ಇವರು ರಚಿಸಿದ ವಚನಗಳು ದಾರಿ ದೀಪಗಳಾಗಿವೆ. ಜಾತಿ–ವರ್ಣ– ಧರ್ಮದ ಆಧಾರದ ಮೇಲೆ, ಹುಟ್ಟು ಅವನ ಸ್ಥಾನಮಾನವನ್ನು ನಿರ್ಧರಿಸುವ ಕಾಲಘಟ್ಟದಲ್ಲಿ, ಶೋಷಣೆಗೆ ಒಳಗಾಗಿದ್ದ ಮನುಷ್ಯನನ್ನು ಸ್ವತಂತ್ರಗೊಳಿಸಲು ಶ್ರಮ ವಹಿಸಿದ ಇವರ ನಡೆ ಜನರ ಹೃದಯಕ್ಕೆ ಹತ್ತಿರವಾಯಿತು. ಪುರುಷ ಪ್ರಧಾನವಾಗಿ, ಮಹಿಳೆ ಅಧೀನಳಾಗಿ ಸ್ತ್ರೀ ಪುರುಷರ ನಡುವೆ ಭೇದವನ್ನು ಕಲ್ಪಿಸುತ್ತಿದ್ದ ಕಾಲದಲ್ಲಿ ಎಲ್ಲರೂ ಒಂದೇ ಎಂಬ ಉದಾತ್ತ ನಿಲುವನ್ನು ಕಂಡ ವಚನಕಾರರು ನಿಜವಾದ ಬಂಡಾಯಗಾರರೂ ಹೌದು. ಮಹಿಳೆ ಮತ್ತು ಪುರುಷ ಕುಟುಂಬದ ನಿರ್ವಹಣೆಗೆ, ಸಮಾಜದ ಮುಂದುವರಿಕೆಗೆ ಅತಿ ಮುಖ್ಯ, ಇಬ್ಬರೂ ಸಮಾಜ ನಿರಂತರವಾಗಿ ಮುಂದುವರೆಯಲು ಅಗತ್ಯ ಎಂಬುದನ್ನು ಮನಗಂಡು ಇಬ್ಬರಿಗೂ ಸಮಾನ ಸ್ಥಾನವನ್ನು ತಂದುಕೊಡಲು ಶ್ರಮಿಸಿದರೆಂದರೆ ತಪ್ಪಾಗಲಾರದು.

ವಚನ ರಚಿಸಿದ ವಚನಕಾರರಲ್ಲಿ ಮುಖ್ಯರಾಗಿ ಬಸವಣ್ಣ, ಅಲ್ಲಮ ಪ್ರಭುದೇವರು, ಚನ್ನಬಸವಣ್ಣ, ಅಂಬಿಗರ ಚೌಡಯ್ಯ, ಡೋಹರ ಕಕ್ಕಯ್ಯ, ಮಡಿವಾಳ ಮಾಚಿದೇವ, ಸಿದ್ಧರಾಮೇಶ್ವರರು, ಗಜೇಶ ಮಸಣಯ್ಯ, ಢಕ್ಕಿಯ ಬೊಮ್ಮಣ್ಣ ಮುಂತಾದ ಪ್ರಸಿದ್ಧ ವಚನಕಾರರ ಸಾಧನೆಯನ್ನು, ಅವರು ಮಾಡಿದ ಸುಧಾರಣೆಯನ್ನು ಹೇಳುವುದು ಸಹಜ. ಆದರೆ ಪುರುಷನಿಗೆ ಹೆಗಲೆಣೆಯಾಗಿ ಸತಿ–ಪತಿ ಭಾವದ ಮೂಲಕ ಮಹಿಳೆಯರು ಕೂಡ ವಚನ ರಚಿಸಿ, ಅವರ ಅಂತರಂಗದ ಸಂವೇದನೆಯನ್ನು ವಚನಗಳ ಮೂಲಕ ಹೊರ ಹಾಕಿದ್ದಾರೆ. ವಚನಕಾರರು ಮಾಡಿದ ಬಹುದೊಡ್ಡ ಸುಧಾರಣೆ ಎಂದರೆ ಮೊದಲನೆದು ವರ್ಗಭೇದ ತೊಡೆದು ಹಾಕುವುದು, ಎರಡನೆಯದು ವರ್ಣಭೇದ ನಿರ್ಮೂಲನಗೊಳಿಸುವುದು, ಮೂರನೆಯದು ಲಿಂಗಭೇದ ನಿರಾಕರಿಸುವುದು. ಹೀಗಾಗಿ ಹುಟ್ಟಿನಿಂದ ತಾವು ಕೀಳು ಎಂಬ ಪಟ್ಟವನ್ನು ಕಟ್ಟಿಕೊಂಡು, ತಾವು ಕೆಳವರ್ಗದವರೆಂದು ಕೀಳರಿಮೆಯಿಂದ ನರಳುತ್ತಿದ್ದ ಜನ ಸಮುದಾಯಕ್ಕೆ ಧೈರ್ಯ ಮತ್ತು ಆತ್ಮವಿಶ್ವಾಸವನ್ನು ತುಂಬಿ ತಲೆ ಎತ್ತಿ ನಿಲ್ಲುವಂತೆ ಮಾಡಿದ ಇವರ ಕಾಳಜಿ ನಿಜಕ್ಕೂ ಮೆಚ್ಚುವಂಥದ್ದು. ವ್ಯಕ್ತಿಯ ಜಾತಿ ಅವನ ಹುಟ್ಟು ಮತ್ತು ಉದ್ಯೋಗದಿಂದ ನಿರ್ಣಯವಾಗುತ್ತದೆ ಎಂಬ ಸ್ಥಾಪಿತ ವಿಚಾರವನ್ನು ಬಸವಾದಿ ಪ್ರಮಥರು ಅತ್ಯಂತ ಪ್ರಜ್ಞಾಪೂರ್ವಕವಾಗಿ ಮತ್ತು ವಿವೇಕದಿಂದ ತಿರಸ್ಕರಿಸಿದ್ದರು. ಹುಟ್ಟಿನಿಂದಲೇ ಜಾತಿ ನಿರ್ಧಾರವಾಗುತ್ತದೆ ಎಂಬ ಸಾಂಪ್ರದಾಯಿಕ ನಿಲುವನ್ನು ಅಲ್ಲಗಳೆದು ಎಲ್ಲ ವೃತ್ತಿಗಳೂ ಸಾಮಾಜಿಕ ಜೀವನಕ್ಕೆ ಅಗತ್ಯ ಎಂಬ ಮೌಲ್ಯವನ್ನು ಪ್ರತಿಪಾದಿಸಿದರು. ಅಂತೆಯೇ ನಮ್ಮ ಚರಿತ್ರೆಯಲ್ಲಿ ಶೂದ್ರರಂತೆ ಅಥವಾ ಕೆಳವರ್ಗದವರಂತೆ ಸಾಮಾಜಿಕ, ಧಾರ್ಮಿಕ ಸಹಜ ಹಕ್ಕಿನಿಂದ ವಂಚಿತರಾದ ಇನ್ನೊಂದು ವರ್ಗ ಮಹಿಳೆಯರದ್ದು. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಶತಶತಮಾನಗಳಿಂದ ಬೆಳೆದು ಬಂದಿದ್ದ ಪುರುಷವರ್ಗದ ಸಂಕುಚಿತತೆ, ಸ್ವಾರ್ಥ ಇವುಗಳ ಫಲವಾಗಿ ರೂಪುಗೊಂಡ ಕಟ್ಟು ಪಾಡುಗಳಿಗೆ ಬದ್ಧಳಾಗಿ ಮಹಿಳೆ ಇದನ್ನು ತನ್ನ ಜನ್ಮಪೂರ್ವ ಕರ್ಮವೆಂದು ಒಪ್ಪಿಕೊಂಡು, ಈ ಸ್ಥಿತಿಗೆ ತನ್ನ ಪೂರ್ವಜನ್ಮದ ಕರ್ಮವೇ ಕಾರಣವೆಂದು ನಂಬಿ ತಲೆ ತಗ್ಗಿಸಿ ನಿಷ್ಪಳಾಗಿ ಏನೆಲ್ಲಾ ಶೋಷಣೆಯನ್ನು ಅನುಭವಿಸಿಕೊಂಡು ಬಾಳುತ್ತಾ ಬಂದಿದ್ದಳು. ಈ ಅಸಮಾನತೆ ಶೋಷಣೆಗಳನ್ನು ಕಂಡ ಬಸವಾದಿ ಪ್ರಮಥರು ಸ್ತ್ರೀ ಪುರುಷ ಭೇದ ರಹಿತ, ಉಭಯ ಪ್ರಧಾನ ಕುಟುಂಬ ಪದ್ಧತಿಯನ್ನು ಅಸ್ತಿತ್ವಕ್ಕೆ ತರಲು ಪ್ರಾಮಾಣಿಕವಾಗಿ ಪ್ರಯತ್ನಿಸಿದರು. 'ನಡುವೆ ಸುಳಿವ ಆತ್ಮ ಗಂಡೂ ಅಲ್ಲ ಹೆಣ್ಣೂ ಅಲ್ಲ' ಎಂಬ ವಚನದ ಮೂಲಕ ಲಿಂಗ ಭೇದವನ್ನು ತೊಡೆದು 'ಹೆಣ್ಣು ಮಾಯೆಯಲ್ಲ ಮನದ ಮುಂದಣ ಆಸೆಯೇ ಮಾಯೆ' ಎಂದು ಮಹಿಳೆಗೆ ಗೌರವವನ್ನು ಕೊಡುವ ಮೂಲಕ ಆಕೆಯಲ್ಲಿ ದೈವತ್ವವನ್ನು ಕಂಡವರು ವಚನಕಾರರು.

ವಚನಕಾರ್ತಿಯರು ಕನ್ನಡದ ಪ್ರಪ್ರಥಮ ಬರಹಗಾರ್ತಿಯರು. ವಚನಕಾರರಿಗಿಂತ ಹಿಂದೆ ನಾಗಚಂದ್ರನ ಸಮಕಾಲೀನಳಾದ ಕಂತಿ ಎಂಬ ಕವಯಿತ್ರಿ ಇದ್ದಳೆಂಬ ಮಾತಿದ್ದರೂ, ಆಕೆ ಬಹುತೇಕ ಕಲ್ಪಿತ ವ್ಯಕ್ತಿ ಎಂದು ಸಾಬೀತಾಗಿರುವುದರಿಂದ ವಚನಕಾರ್ತಿಯರು ಕನ್ನಡದ ಮೊದಲ ಬರಹಗಾರ್ತಿಯರಾಗಿ ಕಾಣಿ ಸಿಗುತ್ತಾರೆ. ಕನ್ನಡ ನಾಡಿನ ಆಧ್ಯಾತ್ಮಿಕ ಕವಯಿತ್ರಿಯಾಗಿ, ಅನುಭಾವಿ ವಚನಕಾರ್ತಿಯಾದ ಅಕ್ಕಮಹಾದೇವಿಯು ಸ್ತ್ರೀ ಸಮಾನತೆ, ಸ್ತ್ರೀ ಸ್ವಾತಂತ್ರ್ಯ ಹಾಗೂ ಸ್ತ್ರೀ ಸ್ವಾಭಿಮಾನದ ಸಂಕೇತವಾಗಿ ವಚನಕಾರ್ತಿಯರಲ್ಲಿ ಎದ್ದು ಕಾಣುವಂತಹ ದಿವ್ಯ ವ್ಯಕ್ತಿತ್ವವುಳ್ಳ ಅಪರೂಪದ ಶರಣೆ. ಮಹಿಳಾ ಸಮುದಾಯದಲ್ಲಿ ಆತ್ಮವಿಶ್ವಾಸವನ್ನು, ಧೈರ್ಯವನ್ನು, ವೈಚಾರಿಕ ಚಿಂತನೆಯನ್ನು ಮೂಡಿಸುವ ಮೂಲಕ ಜಡಗಟ್ಟಿದ ಸಾಮಾಜಿಕ ವ್ಯವಸ್ಥೆಯಲ್ಲಿ ನಿರಂತರವಾಗಿ ನಡೆಯುತ್ತಿದ್ದ ಸ್ತ್ರೀ ಶೋಷಣೆಯ ವಿರುದ್ಧ ಸಿಡಿದು ನಿಂತ ಕ್ರಾಂತಿಕಾರಕ ಸಾಮಾಜಿಕ ಚಿಂತಕಿಯಾಗಿ, ನಾಡಿನ ಇತಿಹಾಸದಲ್ಲಿ ಚಿರಸ್ಥಾಯಿಯಾದ ಸ್ಥಾನವನ್ನು ಗಳಿಸಿಕೊಂಡಿದ್ದಾರೆ. ತನ್ನ ವಚನಗಳ ಮೂಲಕ ಬದುಕಿನಲ್ಲಿ ಸ್ಥಿತಪ್ರಜ್ಞತೆ, ಅನುಭಾವದ ಅರಿವಿನ ಅಗತ್ಯತೆ, ಅನನ್ಯವಾದ ಭಕ್ತಿಯ ಭಾವ, ಜ್ಞಾನದ ಪ್ರಭೆ ಹಾಗೂ ವೈರಾಗ್ಯದ ಅಪೂರ್ವ ವ್ಯಕ್ತಿತ್ವವಾಗಿ ಇತಿಹಾಸದಲ್ಲಿ ಅಜರಾಮರವಾಗಿ ಕಂಡು ಬಂದಿದ್ದಾಳೆ. ವಚನಕಾರ್ತಿಯರಲ್ಲಿ ಹಲವರು ನೂರಾರು ವಚನಗಳನ್ನು ರಚಿಸಿದ್ದಾರೆ. ಮಹಾದೇವಿಯಕ್ಕನಲ್ಲದೆ ಅಕ್ಕಮ್ಮ, ಅಮುಗೆ ರಾಯಮ್ಮ, ನೀಲಮ್ಮ, ಹಡಪದಪ್ಪಣ್ಣನ ಪುಣ್ಯಸ್ತ್ರೀ ಲಿಂಗಮ್ಮ ಇವರ ನೂರಕ್ಕಿಂತ ಹೆಚ್ಚಿನ ವಚನಗಳು ಸಿಗುತ್ತವೆ. ಇವರ ವಚನಗಳಲ್ಲಿ ಗಂಡಸಿನ ದೌರ್ಜನ್ಯವನ್ನು, ಯಜಮಾನ ಪರಿಸ್ಥಿತಿಯ ಬಗ್ಗೆ ಚರ್ಚಿಸದಿರುವುದನ್ನು ಗಮನಿಸಬಹುದಾಗಿದೆ. ಹಲವರು ವಚನಕಾರ್ತಿಯರು ಪುರುಷರ ದೌರ್ಜನ್ಯವನ್ನು ಖಂಡಿಸಿದರೆ, ಕೆಲವರು ಕೌಟುಂಬಿಕ ವ್ಯವಸ್ಥೆಯನ್ನು ಮತ್ತು ತನ್ನ ಪತಿಯ ಹಿರಿತನವನ್ನು ಒಪ್ಪಿಕೊಂಡು ನಡೆದ ವಚನಕಾರ್ತಿಯರನ್ನು ಕಾಣಬಹುದಾಗಿದೆ.

ಜೇಡರ ದಾಸಿಮಯ್ಯನು ಆದ್ಯ ವಚನಕಾರರಾಗಿ ಗುರುತಿಸಿಕೊಂಡಿದ್ದಾರೆ. ಈತ ವಚನಕಾರರಲ್ಲೆಲ್ಲ ಅತ್ಯಂತ ಹಿರಿಯವನಾದುದರಿಂದ ಅವನ ಹೆಂಡತಿ ದುಗ್ಗಳೆಯು ಅತ್ಯಂತ ಹಿರಿಯ ವಚನಕಾರ್ತಿ, ಎಂದರೆ ಕನ್ನಡದ ಮೊದಲ ಬರಹಗಾರ್ತಿ. ಆದರೆ ನಮಗೆ ಸಿಗುವುದು ಆಕೆಯ ಎರಡು ವಚನಗಳನ್ನು ಮಾತ್ರ ಕಾಣಬಹುದಾಗಿದೆ.

ಆಕೆಯ ಒಂದು ವಚನವನ್ನು ಉದಾಹರಿಸಬಹುದಾದರೆ....

ಭಕ್ತನಾದಡೆ ಬಸವಣ್ಣನಂತಾಗಬೇಕು

ಜಂಗಮನಾದಡೆ ಪ್ರಭುದೇವನಂತಾಗಬೇಕು

ಯೋಗಿಯಾದರೆ ಸಿದ್ದರಾಮನಂತಾಗಬೇಕು

ಭೋಗಿಯಾದರೆ ಚೆನ್ನಬಸವಣ್ಣನಂತಾಗಬೇಕು

ಐಕ್ಯನಾದರೆ ನಮ್ಮ ಅಜಗಣ್ಣನಂತಾಗಬೇಕು

ಇಂತೀ ಐವರ ಕಾರುಣ್ಯ ಪ್ರಸಾದವ ಕೊಂಡು

ಸತ್ತಹಾಗಿರಬೇಕಲ್ಲದೆ ತತ್ವದ ಮಾತು ನಮಗೇಕಯ್ಯಾ

ದಾಸಯ್ಯ ಪ್ರಿಯ ರಾಮನಾಥ

ಈ ವಚನದಲ್ಲಿ ದುಗ್ಗಳೆ ವಚನಕಾರರ ಗುಣವಿಶೇಷಣಗಳನ್ನು ಹೇಳುತ್ತಾ ತನಗೆ ಹೆಚ್ಚಿನ ಜ್ಞಾನವಿಲ್ಲವೆಂಬುದನ್ನು ಒಪ್ಪಿಕೊಂಡಿದ್ದಾಳೆ. ಇದುವರೆಗಿನ ಕಾಲಘಟ್ಟದಲ್ಲಿ ಮಹಿಳೆ ಮುಕ್ತವಾಗಿ ಮಾತನಾಡಲು ಸಾಧ್ಯವಾಗದ ಸನ್ನಿವೇಶದಲ್ಲಿ ಮೊದಲ ಬಾರಿಗೆ ಹೊಸ ಪರಂಪರೆಗೆ ನಾಂದಿ ಹಾಡಿದ ದುಗ್ಗಳೆಯ ಈ ವಚನ ತನ್ನನ್ನು ಗಂಡಸಿನ ಪಡಿ ನೆಳಲಿನಲ್ಲಿಯೇ ಗುರುತಿಸಿಕೊಳ್ಳಲು ಬಯಸಿದ್ದಾಳೆ ಎನ್ನಬಹುದಾಗಿದೆ.

ಸ್ವಾಭಿಮಾನದ ಸಾತ್ವಿಕ ಶರಣೆಯಾಗಿ ಕಂಡುಬರುವ ಅಮುಗೆ ರಾಯಮ್ಮ ಭಕ್ತಿ, ಸಾಧನೆ, ವಿಚಾರ, ವೈಚಾರಿಕ ಚಿಂತನೆಗಳ ಮೂಲಕ ಶರಣ ಸಮುದಾಯದಲ್ಲಿಯೇ ವಿಶಿಷ್ಟ ಛಾಪನ್ನು ಮೂಡಿಸಿರುವ ಶಿವಶರಣೆ. ಅಮುಗೇಶ್ವರಾ, ಅಮುಗೇಶ್ವರ ಲಿಂಗದಲ್ಲಿ ಎನ್ನುವ ನಾಮಾಂಕಿತದಲ್ಲಿ ಸುಮಾರು 115 ವಚನಗಳನ್ನು ಬರೆದಿರುವ ಈಕೆ ಅಮುಗೆ ದೇವಯಗಳ ಪತ್ನಿ. ಈಕೆಯ ವೈಯುಕ್ತಿಕ ಜೀವನದ ಬಗ್ಗೆ ಯಾವ ಗ್ರಂಥದಲ್ಲಿಯೂ ಹೆಚ್ಚು ವಿಷಯಗಳು ಕಂಡು ಬಂದಿಲ್ಲವಾದರೂ ಈಕೆಯ ಕುರಿತಂತೆ ಪವಾಡ ವಿಸ್ಮಯ ಘಟನೆಗಳು ಕಂಡುಬರುತ್ತವೆ. ತನ್ನ ವಚನ ರಚನೆಯ ಮೂಲಕ ಕನ್ನಡ ಸಾಹಿತ್ಯಕ್ಕೆ ಕೊಡುಗೆ ನೀಡಿರುವ ಈಕೆಯ ವಚನಗಳಲ್ಲಿ ನೇರ, ನಿಷ್ಠುರ, ವಿಡಂಬನೆ ಹಾಗೂ ಖಂಡನೆಗಳನ್ನು ಕಾಣಬಹುದಾಗಿದೆ. ಸಮಾಜದ ಅಂಕುಡೊಂಕುಗಳನ್ನು ನಿರ್ಭೀತಿಯಿಂದ ಖಂಡಿಸುವ ಅಮುಗೆ ರಾಯಮ್ಮ ಖಂಡಿತವಾದಿ ಶರಣೆಯಾಗಿದ್ದಾಳೆ.

ಒಡೆಯನ ಕಂಡಡೆ ಬಡಿವುದಯ್ಯಾ ಬಾಲವನು ಸುನಿ

ಕೊಡುವ ಕೊಂಬುವರ ಕಂಡು ಅವರಡುಗೆರಗುವರಯ್ಯಾ

ಮೃಡನ ವೇಷವ ತೊಟ್ಟು

ಕುರಿಗಳಂತೆ ತಿರುಗುವ ಜಡ ಜೀವಿಗಳ ಕಂಡಡೆ

ಮೃಡನ ಶರಣರು ಮೋರೆಯನೆತ್ತಿ ನೋಡರು ಕಾಣಾ ಅಮುಗೇಶ್ವರಾ।

ಬಸವಣ್ಣನವರ ನಿಲುವನ್ನೇ ಹೋಲುವ ಈಕೆ ಸ್ವಾಭಿಮಾನದ ಬದುಕನ್ನು, ಛಲವನ್ನು ಎತ್ತಿ ಹಿಡಿಯುವ ಮೂಲಕ ವ್ಯಕ್ತಿ ಯಾರಿಗೂ ದಾಸನಾಗದೆ ತನ್ನ ಸ್ವ ಸಾಮರ್ಥ್ಯ, ಸ್ವಶಕ್ತಿಯಿಂದ, ಸ್ವಾವಲಂಬಿಯಾಗಿ ಬದುಕಬೇಕೆಂಬ ಆಶಯವನ್ನು ವ್ಯಕ್ತಪಡಿಸುತ್ತಾಳೆ. ಕುರಿಗಳಂತೆ ತಲೆತಗ್ಗಿಸಿ ಬಾಳುವುದಕ್ಕಿಂತ ತಲೆ ಎತ್ತಿ ಬದುಕಿದಾಗ ಅವನನ್ನು ನಿಜಶರಣ ಎಂದು ಕರೆಯಬಹುದು. ಆ ಮೂಲಕ ಸ್ವತಂತ್ರ ಸಮಾಜ ನಿರ್ಮಾಣದ ಆಶಯಕ್ಕೆ ಈಕೆ ನಾಂದಿ ಹಾಡುತ್ತಾಳೆ. 'ತನ್ನ ತಾನರಿದೊಡೆ ನುಡಿಯೆಲ್ಲ ತತ್ವ' ಎಂಬ ವಚನದ ಮಾತಿನಂತೆ ತನ್ನನ್ನು ತಾನು ಅರಿಯುವ ನೆಲೆಯನ್ನು ಆಕೆ ತನ್ನ ಮತ್ತೊಂದು ವಚನದಲ್ಲಿ...

ಎನ್ನ ಕಣ್ಣೊಳಗೆಣ ಕಟ್ಟಿಗೆಯ ಮುರಿವವನಾರನೂ ಕಾಣೆ

ಎನ್ನ ಕಾಲೊಳಗಣ ಮುಳ್ಳ ತೆಗೆವವರನಾರನೂ ಕಾಣೆ

ಎನ್ನ ಅಂಗದೊಳಗಿಪ್ಪ ಅಹಂಕಾರವ ಸುಡುವವರನಾರನೂ ಕಾಣೆ

ಎನ್ನ ಮನದಲ್ಲಿಪ್ಪ ಮಾಯಾ ಪ್ರಪಂಚವ

ಕೆಡಿಸುವವರನಾರನೂ ಕಾಣೆನಯ್ಯಾ

ಆದ್ಯರ, ವೇದ್ಯರ ವಚನಗಳಿಂದ ಅರಿದೆವೆಂಬವರು ಅರಿಯಲಾರರು ನೋಡಾ.

ಎನ್ನ ಕಣ್ಣೊಳಗಣ ಕಟ್ಟಿಗೆಯ ನಾನೇ ಮುರಿಯಬೇಕು

ಎನ್ನ ಕಾಲೊಳಗಣ ಮುಳ್ಳ ನಾನೇ ತೆಗೆಯಬೇಕು

ಎನ್ನ ಅಂಗದಲ್ಲಿಪ್ಪ ಅಹಂಕಾರವ ನಾನೇ ಸುಡಬೇಕು

ಎನ್ನ ಮನದಲ್ಲಿಪ್ಪ ಮಾಯಾ ಪ್ರಪಂಚವ ನಾನೇ ಕಳೆಯಬೇಕು

ಅಮುಗೇಶ್ವರಲಿಂಗವ ನಾನೇ ಅರಿಯಬೇಕು

ಎನ್ನುವಲ್ಲಿ ಕಣ್ಣೊಳಗಿನ ಕಾಮನೆಯನ್ನು ನಾನೇ ತಡೆಯಬೇಕು, ತನ್ನಂಗದ ಅಹಂಕಾರವನ್ನು ತನ್ನ ಇಷ್ಟ ದೈವ ಅಮುಗೇಶ್ವರ ಲಿಂಗವನ್ನು ಅರಿಯುವ ಮೂಲಕ ತ್ಯಜಿಸಬೇಕು ಎಂದು ಹೇಳುತ್ತಾ ಎಲ್ಲಕ್ಕೂ ಮೂಲ ತನ್ನ ಅರಿವೇ ತನಗೆ ಗುರುವಾಗಬೇಕು ಎಂಬ ಅರ್ಥಪೂರ್ಣ ಅಂತರಾರ್ಥವಿರುವ ಮಾತನ್ನು ಈಕೆ ತಿಳಿಸಿದ್ದಾಳೆ.

ಅನುಭವ ಮಂಟಪದಲ್ಲಿ ನಡೆಯುತ್ತಿದ್ದ ವಿಚಾರಗೋಷ್ಠಿಗಳಲ್ಲಿ ನಿರ್ಭೀತಿಯಿಂದ, ನಿಖರತೆಯಿಂದ ತನ್ನ ವಿಚಾರಗಳನ್ನು ಮಂಡಿಸಿದ ಮತ್ತೊಬ್ಬ ಶರಣೆ ಅಕ್ಕಮ್ಮ. ಈಕೆಯ 152 ವಚನಗಳು ಸಿಗುತ್ತವೆ. ತನ್ನ ಸಮಕಾಲೀನ ಮತ್ತು ಹಿರಿಯ ಶರಣರನ್ನು ನೆನಪಿಸಿ ತನ್ನ ಆಚಾರವಂತ ಕಾಯಕ ನಿಷ್ಠೆಯನ್ನು ಮೆರೆದಿದ್ದಾಳೆ. ವ್ರತ ನಿಯಮಗಳೇ ಬದುಕಿನ ಭದ್ರಬುನಾದಿ ಎಂದು ನಂಬಿರುವ ಈಕೆ, ವ್ರತಭ್ರಷ್ಟರು, ಆಚಾರಹೀನರನ್ನು ನಿಕೃಷ್ಟವಾಗಿ ಖಂಡಿಸಿದ್ದಾಳೆ.

ಆಚಾರ ತಪ್ಪಿದಲ್ಲಿ ಪ್ರಾಯಶ್ಚಿತ್ತ ಉಂಟೆಂಬ

ಅನಾಚಾರಿಗಳ ಮುಖವ ನೋಡಬಹುದೇ?

ಎಂದು ತೀಕ್ಷ್ಣವಾಗಿ ಪ್ರಶ್ನಿಸುತ್ತಾಳೆ.

'ಕಾಮಿಗೆ ವ್ರತ ಉಂಟೆ ನಿಃಕಾಮಿಗಲ್ಲದೆ

ಕ್ರೋಧಿಗೆ ವ್ರತ ಉಂಟೆ ಸಮಾಧಾನಿಗಲ್ಲದೆ

ಲೋಭಿಗೆ ವ್ರತ ಉಂಟೆ ಉದಾರಿಗಲ್ಲದೆ?'

'ಖ್ಯಾತಿಯ ಲಾಭಕ್ಕೆ ವ್ರತವ

ಮಾಡಿಕೊಂಡವನ ನೇಮವ ನೋಡಾ'

'ಭಕ್ತಂಗೆ ಬಯಕೆ ಉಂಟೆ ನಿತ್ಯಂಗೆ ಸಾವುಂಟೆ

ಸದ್ಭಕ್ತಂಗೆ ಮಿಥ್ಯ ತಥ್ಯ ಉಂಟೆ'

ಎಂಬ ವಚನಗಳ ಮೂಲಕ ವ್ಯಕ್ತಿ ವ್ರತನಿಷ್ಠನಾಗಿ ಬದುಕಿದಾಗ ಸಮಾಜ ಶುದ್ಧವಾಗಿರಲು ಸಾಧ್ಯವಾಗುತ್ತದೆ. ಸತ್ಯ, ನಿಷ್ಠೆ, ಪ್ರಾಮಾಣಿಕತೆಗಳನ್ನು ಅಳವಡಿಸಿಕೊಂಡಾಗ ಸಮಾಜ ಸತ್ಯವಾಗಿ ಇರಲು ಸಾಧ್ಯವಾಗುತ್ತದೆ ಎನ್ನುವ ಮೌಲ್ಯಾಧಾರಿತ ಬದುಕಿನ ಕ್ರಮವನ್ನು ಈಕೆ ಪ್ರತಿಪಾದಿಸುತ್ತಾಳೆ.

ಸಮಕಾಲಿನ ಸಮಾಜದ ಸಾಮಾಜಿಕ ಮತ್ತು ಧಾರ್ಮಿಕ ಅಂಕುಡೊಂಕುಗಳನ್ನು, ಓರೆ ಕೋರೆಗಳನ್ನು, ಮನುಷ್ಯ ಸ್ವಭಾವದ ಅಸ್ವಭಾವಿಕತೆಯನ್ನು ಮುಕ್ತವಾಗಿ ವಿಶ್ಲೇಷಿಸಿದ ಮತ್ತೊಬ್ಬ ವಚನಕಾರ್ತಿ ಕದಿರ ರೆಮ್ಮವ್ವೆ. ಈಕೆವ ವಚನಗಳಲ್ಲಿ ವ್ರತಾಚಾರ ನಿಷ್ಠೆ, ಕಾಯಕ ಶ್ರದ್ಧೆ, ಸಮಾಜ ಶುದ್ಧೀಕರಣದ ಕಾಳಜಿಯುಳ್ಳ ವಿಚಾರಗಳನ್ನು ಈಕೆ ಪ್ರತಿಪಾದಿಸುತ್ತಾಳೆ. ಬಸವಣ್ಣನವರ ಸಮಕಾಲೀನ ವಚನಕಾರ್ತಿ ಎಂಬುದನ್ನು ಕವಿ ಚರಿತಕಾರರು ಗುರುತಿಸಿದ್ದಾರೆ. ಈಕೆ ಕದಿರ ರೆಮ್ಮಯ್ಯನವರ ಪತ್ನಿ. ರಾಟಿಯಿಂದ ನೂಲು ತೆಗೆಯುವ ಕಾಯಕದ ಮೂಲಕ ಆಧ್ಯಾತ್ಮ ಸಾಧನೆ ಮಾಡಿದ ಕಾಯಕಯೋಗಿಯಾಗಿದ್ದಾಳೆ.

ನಾ ತಿರುಹುವ ರಾಟಿಯ ಕುಲಜಾತಿಯ ಕೇಳಿರಣ್ಣಾ

ಅಡಿಯ ಹಲಗೆ ಬ್ರಹ್ಮ, ತೋರಣ ವಿಷ್ಣು,

ನಿಂದ ಬೊಂಬೆ ಮಹಾರುದ್ರ

ರುದ್ರನ ಬೆಂಬಳಿಯವೆರಡು ಸೂತ್ರ ಕರ್ಣ

ಅರಿವೆಂಬ ಕದಿರು, ಭಕ್ತಿಯೆಂಬ ಕೈಯಲ್ಲಿ ತಿರುಹಲಾಗಿ,

ಸುತ್ತಿತ್ತು ನೂಲು ಕದಿರು ತುಂಬಿತ್ತು

ರಾಟೆಯ ತಿರುಹಲು ಎನ್ನ ಗಂಡ ಕುಟ್ಟಿಹ

ಇನ್ನೇವೆ ಕದಿರರೆಮ್ಮಿಯೊಡೆಯ ಗುಮ್ಮೇಶ್ವರಾ?

ತನ್ನ ಕಾಯಕ ವಿವರಗಳ ಮೂಲಕ ಆಧ್ಯಾತ್ಮಿಕ ಪ್ರಕ್ರಿಯೆಯನ್ನು ಈಕೆ ವಿವರಿಸುತ್ತಾಳೆ.

ವಚನ ಚಳವಳಿಯ ನಿಜವಾದ ಆಶಯ ಮತ್ತು ಸಾರ್ಥಕತೆಯಾದದ್ದೇ ದಲಿತ ವರ್ಗಕ್ಕೆ ಸೇರಿದ, ತಳ ಸಮುದಾಯದ ಮಹಿಳೆಯರು ವಚನ ರಚನೆ ಮಾಡಲು ವೇದಿಕೆ ಕಲ್ಪಿಸಿದ ಕಾರಣಕ್ಕೆ. ಪುರುಷರೊಂದಿಗೆ ಮಹಿಳೆಯರು ಪರಸ್ಪರವಾಗಿ ತಮ್ಮ ಉದಾತ್ತ ಆಲೋಚನೆಗಳನ್ನು ಮಾಡುತ್ತಾ ಸಮಾಜವಾದದ ಪರಿಕಲ್ಪನೆಯನ್ನು ಸಾಕಾರಗೊಳಿಸಿದ್ದು. ದಲಿತ ವರ್ಗಕ್ಕೆ ಸೇರಿದ ಕಾಲಕಣ್ಣಿಯ ಕಾಮಮ್ಮನ ಒಂದು ವಚನವನ್ನು ಇಲ್ಲಿ ಉದಾಹರಿಸಬಹುದಾಗಿದೆ. ಕೆಳ ಜಾತಿಗೆ ಸೇರಿದ ಈಕೆ ಬುಟ್ಟಿ, ಚಾಪೆ, ಮೊರ ಹೆಣೆಯುವ ಕಾಯಕ ಮಾಡುತ್ತಾ ಶಿವಶರಣರ ಸಾಮೀಪ್ಯಯನ್ನು ಪಡೆದು ಬದುಕನ್ನು ಸಾಗಿಸಿದವಳು.

ಎನ್ನ ಕರಣಂಗಳ ಲಿಂಗದಲ್ಲಿ ಕಟ್ಟುವೆ

ಗುರು ಲಿಂಗ ಜಂಗಮದ ಕಾಲ ಕಟ್ಟುವೆ

ವ್ರತಭ್ರಷ್ಟರ ನಿಟ್ಟೊರಸುವೆ, ಸುಟ್ಟು ತುರತುರನೆ ತೂರುವೆ

ನಿರ್ಭೀತ ನಿಜಲಿಂಗದಲ್ಲಿ?

ಎಂಬ ಈಕೆಯ ವಚನ ಮಹಿಳೆಯರು ಹೇಗೆ ವ್ರತಭ್ರಷ್ಟರನ್ನು ಕಂಡಾಗ ಅದನ್ನು ವಿರೋಧಿಸುವ ಕೆಚ್ಚದೆ ಇತ್ತು ಎಂಬುದಕ್ಕೆ ಉದಾಹರಣೆಯಾಗಿದೆ. ಸಮಾಜದಲ್ಲಿ ಕಾಣುವ ಅನ್ಯಾಯವನ್ನು, ಅಕ್ರಮವನ್ನು ಯಾವುದೇ ಭಯ ಇಲ್ಲದೆ ಎದುರಿಸುವ ರೀತಿಯನ್ನು ಕಾಮಮ್ಮನ ಈ ವಚನದಿಂದ ಕಾಣಬಹುದಾಗಿದೆ.

ಇದೇ ರೀತಿಯಾಗಿ ಬಸವಯುಗದ, ಬಸವಣ್ಣನ ಸಮಕಾಲೀನಳಾಗೆ ಕಂಡುಬರುವ ಕಾಟಕೂಟಯ್ಯಗಳ ಪುಣ್ಯಸ್ತ್ರೀ ರೇಚವ್ವೆಯು ನಿಜಶಾಂತೇಶ್ವರಾ ಎಂಬ ಅಂಕಿತದ ಮೂಲಕ ವಚನ ಬರೆದಿರುವ ಬಗ್ಗೆ ವಿದ್ವಾಂಸರು ಒಂದು ವಚನವನ್ನು ಸಂಪಾದಿಸಿಕೊಟ್ಟಿದ್ದಾರೆ. ವಚನ ಸಾಹಿತ್ಯದ ಆಶಯವೇ ಗುರು–ಲಿಂಗ– ಜಂಗಮ ನಿಷ್ಠೆ, ಸದಾಚಾರ, ಸಮಾನತೆ, ವ್ರತನಿಷ್ಠೆ ಇವುಗಳನ್ನು ಆಚರಿಸುವುದು. ತನ್ನ ಇಷ್ಟ ದೈವದ ಎದುರಿಗೆ ಆತ್ಮನಿವೇದನೆ ಮಾಡಿಕೊಳ್ಳುತ್ತಾ, ಆತ್ಮಸಾಕ್ಷಿಗನುಸಾರವಾಗಿ ನಿರ್ಭೀತಿಯಿಂದ ಬದುಕುವ, ಸಮಾಜಕ್ಕೆ ಮಾದರಿಯಾಗುವ ಜೀವನವನ್ನು

ಸಾಗಿಸುವ ಈ ವಚನಕಾರರಿಗೆ ವ್ರತಹೀನರನ್ನು ಕಂಡರೆ ಸಹಿಸಿಕೊಳ್ಳುವುದಿಲ್ಲ ಎಂಬ ಸ್ಪಷ್ಟ ಸಂದೇಶವನ್ನು ಕೊಟ್ಟವರಲ್ಲಿ ಪುಣ್ಯಸ್ತ್ರೀ ರೇಚವ್ವೆಯು ಮುಖ್ಯಳಾಗುತ್ತಾಳೆ.

ಬಂಜೆಯಾವಿಂಗೆ ಕ್ಷೀರವುಂಟೆ?

ವ್ರತಹೀನನ ಬೆರೆಯಲುಂಟೆ?

ನೀ ಬೆರೆದಡೂ ಬೆರೆ, ನಾನೊಲ್ಲೆ ನಿಜಶಾಂತೇಶ್ವರಾ

ಎಂಬ ವಚನದ ಮೂಲಕ ವ್ರತಹೀನರನ್ನು ಯಾವುದೇ ಕಾರಣಕ್ಕೂ ಬೆರೆಯಲು ಸಾಧ್ಯವಿಲ್ಲ. ಅವರು ಸಮಾಜದ ಎದುರಿಗೆ ತಮ್ಮ ಇರುವಿಕೆಯನ್ನು ತೋರಿಸಿಕೊಳ್ಳಲು ಅರ್ಹರಲ್ಲ. ವ್ರತನಿಷ್ಠರು ಮಾತ್ರ ಸಮಾಜಕ್ಕೆ ಮಾದರಿ ಮತ್ತು ಅಗತ್ಯ ಎಂಬುದನ್ನು ಅತ್ಯಂತ ನೇರವಾಗಿ ಹೇಳಿದ ಉದಾಹರಣೆಯಾಗಿದೆ.

ಗಂಡು ಹೆಣ್ಣಿನ ಅಸಮಾನತೆಯನ್ನು ದಿಟ್ಟವಾಗಿ ಪ್ರಶ್ನಿಸಿದ ವಚನಕಾರ್ತಿಯರಲ್ಲಿ ಗಜೇಶ ಮಸಣಯ್ಯಗಳ ಪುಣ್ಯಸ್ತ್ರೀ ಮುಖ್ಯರಾಗಿ ಕಂಡುಬರುತ್ತಾರೆ. ಈಕೆ 10 ವಚನಗಳನ್ನು ಬರೆದಿದ್ದಾಳೆನ್ನಲಾದ ಈಕೆಯ ವಚನಾಂಕಿತ ಮಸಣಯ್ಯಪ್ರಿಯ ಗಜೇಶ್ವರ ಎಂಬುದು. ವಚನಕಾರ ಗಜೇಶ ಮಸಣಯ್ಯನ ಪತ್ನಿಯಾದ ಈಕೆ ಸತಿಪತಿ ಭಾವವನ್ನು ತಮ್ಮ ವಚನಗಳ ಮೂಲಕ ಅಭಿವ್ಯಕ್ತಿಸಿದ ವಚನಕಾರ್ತಿ. ಸ್ತ್ರೀ ಪುರುಷ ಸಮಾನತೆಯ ಆಶಯವನ್ನೇ ಪ್ರತಿಪಾದಿಸಿದ ವಚನ ಸಾಹಿತ್ಯದಲ್ಲಿ ವರ್ಣಾಶ್ರಮ ವ್ಯವಸ್ಥೆ ಮತ್ತು ಪುರೋಹಿತಶಾಹಿ ಮುಂದಿಟ್ಟಿದ್ದ ಅನೇಕ ಅಸಮಾನತೆಯನ್ನು ಈಕೆ ವಿರೋಧಿಸಿದ್ದನ್ನು ಕಾಣಬಹುದಾಗಿದೆ.

ಹೆಣ್ಣ ಬಿಟ್ಟು ಲಿಂಗವನೊಲಿಸಬೇಕೆಂಬರು

ಹೆಣ್ಣಿಂಗೆಯೂ ಲಿಂಗಕ್ಕೆಯೂ ವಿರುದ್ಧವೇ?

ಎಂದು ಪ್ರಶ್ನಿಸುವ ರೀತಿ ಪುರುಷ ಪ್ರಧಾನ ವ್ಯವಸ್ಥೆಗೆ ಮತ್ತು ಅಸಮಾನತೆಯ ವಿರುದ್ಧ ಎತ್ತಿದ ದನಿಗೆ ಸಾಕ್ಷಿಯಾಗಿದೆ. ಈಕೆ ಬಸವಣ್ಣ, ಚನ್ನಬಸವಣ್ಣ, ಪ್ರಭುದೇವ, ಮರುಳ ಶಂಕರರನ್ನು ಗುರು – ಲಿಂಗ – ಜಂಗಮ – ಪ್ರಸಾದ ರೂಪದಲ್ಲಿ ಕಂಡ ಈಕೆಯ ಸಾಧನೆ ಸಿದ್ಧಿಯೋಗ ಪಡೆದದ್ದು ಮತ್ತು ಆ ಕಾಲದ ಮಹಿಳಾ ಸಮಾನತೆಗೆ ಆದ್ಯತೆ ನೀಡಿದ ಬಸವಣ್ಣನನ್ನು ಕುರಿತು 'ಗುರುವಿಂಗೆ ಗುರುವಾಗಿ ಎನಗೆ ಗುರುವಾದನಯ್ಯ ಬಸವಣ್ಣನು' ಎಂದು ತನ್ನ ಸಾರ್ಥಕತೆಯನ್ನು, ಮಹಿಳಾ ಸಮಾನತೆಯ ಪರವಾದ ದನಿಯನ್ನು ಎತ್ತಿದ್ದಲ್ಲದೆ ಬಸವಣ್ಣನಿಗೆ ಗೌರವಿಸಿದ್ದಾಳೆ.

ವ್ರತನಿಷ್ಠೆಯ ಬಗ್ಗೆ ಮಾತನಾಡಿದ ಅನೇಕ ವಚನಕಾರ್ತಿಯರಲ್ಲಿ ಗುಂಡಯ್ಯಗಳ ಪುಣ್ಯಸ್ತ್ರೀ ಕೇತಲದೇವಿಯೂ ಒಬ್ಬರಾಗಿದ್ದಾರೆ. ಈಕೆಯ ಎರಡು ವಚನಗಳು ಸಿಕ್ಕಿವೆ. ಈಕೆ ಕುಂಬಾರ ಗುಂಡಯ್ಯನ ಸತಿಯಾಗಿರಬಹುದು ಎಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಶರಣ ದಂಪತಿಗಳಾದ ಗುಂಡಯ್ಯ ಮತ್ತು ಕೇತಲದೇವಿ ತಮ್ಮ ಕಾಯಕದ ವೃತ್ತಿಯನ್ನೇ ತತ್ವಮಯವನ್ನಾಗಿ ಮಾಡಿಕೊಂಡು ಸಾರ್ಥಕ ಜೀವನ ಮಾಡಿದ್ದರೆ ಮಾಹಿತಿ ಸಿಗುತ್ತದೆ. ಕೇತಲದೇವಿ ತನ್ನ ಪತಿಯ ಕಾಯಕದಲ್ಲಿ ನೆರವಾಗುವುದಲ್ಲದೆ ತನ್ನದೇ ಆದ ವ್ರತಾಚರಣೆಯನ್ನು ಕೈಗೊಂಡಿದ್ದವಳು. ಹರಳಯ್ಯ ಮತ್ತು ಕಲ್ಯಾಣಮ್ಮ ತಮ್ಮ ತೊಡೆಯ ಚರ್ಮವನ್ನೇ ಇಷ್ಟ ಲಿಂಗಕ್ಕೆ ಪಾದರಕ್ಷೆಯನ್ನಾಗಿ ಮಾಡಿ ಸಮಾಜೋದ್ಧಾರಕರಾದ ಬಸವಣ್ಣನವರಿಗೆ ಅರ್ಪಿಸಿ ಪಾವನರಾದಂತೆ, ಶರಣೆ ಕೇತಲದೇವಿಯೂ ಚರ್ಮವನ್ನೇ ಪಾವಡವನ್ನಾಗಿ ಅರ್ಪಿಸಿದ ಮಹಾಶರಣೆ, ಆ ಮೂಲಕ ತನ್ನ ವೀರನಿಷ್ಠೆ ಮತ್ತು ವ್ರತಾಚರಣೆಯಿಂದ ಶಿವನನ್ನೇ ಒಲಿಸಿಕೊಂಡಳೆಂಬ ಮಾಹಿತಿ ಲಭ್ಯವಿದೆ.

'ಹದ ಮಣ್ಣಲ್ಲದೆ ಮಡಕೆಯಾಗಲಾರದು,

ವ್ರತಹೀನನ ಬೆರೆಯಲಾಗದು

ಬೆರೆದಡೆ ನರಕ ತಪ್ಪದು

ನಾನೊಲ್ಲೆ ಬಲ್ಲೆನಾಗಿ ಕುಂಭೇಶ್ವರಾ'

ಎಂಬ ವಚನದ ಮೂಲಕ ಚಿತ್ತ ಹುತ್ತಗಟ್ಟಬೇಕೆಂಬ, ಪರಿಪಕ್ವವಾಗಬೇಕೆಂಬ ಮಾಹಿತಿಯನ್ನು ಕೊಡುತ್ತಾಳೆ. ಮಣ್ಣು ಹದವಾಗದೆ ಮಡಿಕೆಯಾಗುವುದಿಲ್ಲ ಎಂಬ ತನ್ನ ವೃತ್ತಿ ಸೂಚಕ ಸಂಕೇತಗಳ ಮೂಲಕವೇ ಆಕೆ ಸಾಮಾಜಿಕ ವ್ಯವಸ್ಥೆಗೆ ಕಂಟಕನಾಗುವ ವ್ರತಹೀನನನ್ನು ಕುರಿತು ಮಾತಾಡಿದ್ದು ವಿಶೇಷವಾಗಿದೆ. ವ್ರತಹೀನನನ್ನು ಬೆರೆತಾಗ ನರಕ ತಪ್ಪುವುದಿಲ್ಲ ಎಂಬ ಸ್ಪಷ್ಟ ಸಂದೇಶವನ್ನು ಈಕೆ ಸಮಾಜಕ್ಕೆ ಕೊಡುತ್ತಾಳೆ. ಕುಂಭೇಶ್ವರಾ ಎಂಬ ಅಂಕಿತದ ಮೂಲಕ ತನ್ನ ವಚನಗಳನ್ನು ರಚನೆ ಮಾಡಿದ್ದಾಳೆ.

ಅಲ್ಲದೆ ಅನೇಕ ಜನ ವಚನಕಾರ್ತಿಯರಾದ ಶಿವಶರಣೆ ಧೂಪದ ಗೊಗ್ಗವ್ವೆ, ದಸರಯ್ಯಗಳ ಪುಣ್ಯಸ್ತ್ರೀ ವೀರಮ್ಮ, ಅಕ್ಕನಾಗಮ್ಮ, ನೀಲಾಂಬಿಕೆ, ಗಂಗಾಂಬಿಕೆ, ಬೊಂತಾದೇವಿ, ಮುಕ್ತಾಯಕ್ಕ, ಮೋಳಿಗೆ ಮಹಾದೇವಿ, ಉರಿಲಿಂಗಪೆದ್ದಿಗಳ ಪುಣ್ಯಸ್ತ್ರೀ ಕಾಳವ್ವೆ, ಶರಣೆ ಗಂಗಮ್ಮ, ನಾಗಿದೇವಯ್ಯಗಳ ಪುಣ್ಯಸ್ತ್ರೀ ಮಸಣಮ್ಮ, ಕನ್ನಡಿ ಕಾಯಕ ರೇವಮ್ಮ, ಶರಣೆ ಸತ್ಯಕ್ಕ, ಹಡಪದ ಅಪ್ಪಣ್ಣಗಳ ಪುಣ್ಯಸ್ತ್ರೀ ಲಿಂಗಮ್ಮ, ಸಂಕವ್ವೆ, ಕಾಳವ್ವೆ, ರೇಕಮ್ಮ, ದುಗ್ಗಳೆ, ಸೋಮವ್ವೆ, ಲಕ್ಷ್ಮಮ್ಮ, ಗುಡ್ಡವ್ವೆ ಮುಂತಾದ ವಚನಕಾರ್ತಿಯರನ್ನು ಉದಾರಿಸಬಹುದಾಗಿದೆ.

ಸರ್ವ ಸಮಾನತೆಯ ಆಧಾರದ ಮೇಲೆ ಸಮಾಜವನ್ನು ಕಟ್ಟ ಹೊರಟ ಬಸವಣ್ಣನವರಿಗೆ ಮತ್ತು ವಚನಕಾರರಿಗೆ ಮಹಿಳೆಯರು ಅತ್ಯಂತ ಸಮನಾಗಿ ಕಾಣುತ್ತಾರೆ. ಜಾತಿ, ವರ್ಗ, ವರ್ಣ ಭೇದದಿಂದ ಕೂಡಿದ್ದ ಸಂದರ್ಭದಲ್ಲಿ ಎಲ್ಲರೂ ಸಮಾನರು ಎಂದು ಕಾಣ ಹೊರಟ ವಚನಕಾರರ ನಿಲುವು ಆದರ್ಶವಾದದ್ದು. ಕೇವಲ ಭೌತಿಕ ಸಂಕೇತಗಳ ಮೂಲಕ ಗಂಡು – ಹೆಣ್ಣು ಎಂದು ಗುರುತಿಸಿದರೂ, ನಡುವೆ ಸುಳಿಯುವ ಆತ್ಮಕ್ಕೆ ಆ ಭೇದವಿಲ್ಲ ಎಂಬುದನ್ನು ಅವರು ಮನಗಂಡಿದ್ದರು. ಆ ಕಾರಣಕ್ಕಾಗಿ ತಳ ಸಮುದಾಯದ ದಲಿತ ವರ್ಗದ ಮಹಿಳೆಯರಿಗೂ ಅನುಭವ ಮಂಟಪದಲ್ಲಿ ಸಮಾನ ಸ್ಥಾನವನ್ನು ಕೊಡುವ ಮೂಲಕ ತಮ್ಮ ಸಂವೇದನೆಯನ್ನು ಹೊರಹಾಕಲು ಅವಕಾಶ ಮಾಡಿಕೊಟ್ಟರು. ಸತ್ಯಕ್ಕನಂತಹ ಕಲ್ಯಾಣದ ಬೀದಿಯ ಕಸ ಗುಡಿಸುವ ಮಹಿಳೆಗೂ ಸಮಾನ ಸ್ಥಾನ ನೀಡಿದ, ಸೂಳೆ ಸಂಕವ್ವೆಯಂತಹ ಮಹಿಳೆಗೂ ಸಮಾನ ಅವಕಾಶವನ್ನು ಕಲ್ಪಿಸಿದ ವಚನಕಾರರ ನಿಲುವು ಇಂದಿಗೂ ಆದರ್ಶ.

**ಪರಾಮರ್ಶನ ಗ್ರಂಥಗಳು:**


1. ಬಸವ ವಚನಾಮೃತ., (ಸಂ) ಎಲ್. ಬಸವರಾಜು., ಬಸವ ಸಮಿತಿ., ಬೆಂಗಳೂರು–1., 1995
2. ವಚನ ವರ್ಷ., (ಸಂ) ಬಸವರಾಜ ಸಾದರ., ಪ್ರ ಅಖಿಲ ಶರಣ ಸಾಹಿತ್ಯ ಪರಿಷತ್ತು, ಮೈಸೂರು 2017.
3. ಅನುಭಾವ ಸಂಗಮ., ಮುದ್ದೇನಹಳ್ಳಿ ನಂಜಯ್ಯ., ರವಿಚಂದ್ರ ಪ್ರಕಾಶನ., ತುಮಕೂರು., 2013
4. ಬಸವಯುಗದ ವಚನ ಮಹಾಸಂಪುಟ., ಎಂ. ಎಂ ಕಲಬುರ್ಗಿ(ಸಂ)., 1993, 2001, 2016., ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು